# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 25 ಫ್ರಾ.ಸಾ. : 07**

ಸಾಕ್ಷಿಯ ಹೆಸರು : ಮಹಮ್ಮದ್ ಶರೀಫ್
ತಂದೆಯ ಹೆಸರು : ಯು.ಕೆ ಹಸನಬ್ಬ
ವಯಸ್ಸು : 55 ವರ್ಷ
ಕೆಲಸ : ಶಿಪ್ಪಿಂಗ್ ಕಾಂಟ್ರ್ಯಾಕ್ಟರ್
ವಾಸ : ಉಲ್ಲಾಳ, ಮಂಗಳೂರು

**ದಿನಾಂಕಃ 14-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2008 ರಿಂದ ನಾನು ಮಂಗಳೂರಿನ ಬಂದರಿನಲ್ಲಿ ಪೊಯಿನೂರ ಶಿಪ್ಪಿಂಗ್ ಕಂಪನಿಯನ್ನು ನಡೆಸಿಕೊಂಡು ಬಂದಿದ್ದು, ನಾನೇ ಅದರ ಮಾಲೀಕನಾಗಿರುತ್ತೇನೆ. ಸದರಿ ಶಿಪ್ಪಿಂಗ್ ಕಂಪನಿಯನ್ನು ನಡೆಸಲು ಸರಕಾರದಿಂದ ಅವಶ್ಯವಿರುವ ಪರವಾನಗಿಗಳನ್ನು ಪಡೆದುಕೊಂಡಿರುತ್ತೇನೆ. ದೇಶ-ವಿದೇಶಗಳಿಂದ ಹಡಗುಗಳಲ್ಲಿ ಬಂದ ಸರಕುಗಳನ್ನು ಅನ್ ಲೋಡಿಂಗ್ ಮಾಡುವುದು ಹಾಗೂ ಸರಕುಗಳನ್ನು ಹಡಗುಗಳಿಗೆ ಲೋಡಿಂಗ್ ನಮ್ಮ ಶಿಪ್ಪಿಂಗ್ ಕಂಪನಿಯ ಕೆಲಸವಾಗಿರುತ್ತದೆ. 2015-2016 ನೇ ಇಸ್ವಿಯಲ್ಲಿ ನಾನು ನಮ್ಮ ಶಿಪ್ಪಿಂಗ್ ಕಂಪನಿಯ ಒಂದು ಬ್ಯಾಂಚ್ ನ್ನು ಕಾರವಾರದ ಬೈತಕೋಲನ ಬಂದರಿನಲ್ಲಿ ಪ್ರಾರಂಭಿಸಿರುತ್ತೇನೆ ಹಾಗೂ ಅದಕ್ಕೆ ಅವಶ್ಯವಿರುವ ಪರವಾನಗಿಗಳನ್ನು ಸರಕಾರದಿಂದ ಪಡೆದುಕೊಂಡಿರುತ್ತೇನೆ.

2. ಈ ಪ್ರಕರಣದ ಮೃತ ಪ್ರೇಮಕುಮಾರ ಹಾಗೂ 1 ನೇ ಆರೋಪಿ ರಿಜ್ವಾನ್ ನನಗೆ ಗೊತ್ತು. ಕಾರವಾರದ ಬೈತಕೋಲನ ಬಂದರಿನಲ್ಲಿ 1 ನೇ ಆರೋಪಿಗೆ ಸಂಬಂಧಿಸಿದ ಶಿಪ್ಪಿಂಗ್ ಕಂಪನಿ ಇತ್ತು. ಮೃತ ಪ್ರೇಮಕುಮಾರ ಸಹ ಬೈತಕೋಲನ ಬಂದರಿನಲ್ಲಿ ಸಣ್ಣ -ಪುಟ್ಟ ಕೆಲಸಗಳನ್ನು ಮಾಡುತ್ತಿದ್ದ ಕಾರಣ, ನನಗೆ ಆತನ ಪರಿಚಯವಾಗಿರುತ್ತದೆ. ನನಗೆ ಮಂಗಳೂರಿನಿಂದ ಕಾರವಾರಕ್ಕೆ ಬಂದು ಶಿಪ್ಪಿಂಗ್ ಕಂಪನಿಯ ವ್ಯವಹಾರ ನಡೆಸಲು ತೊಂದರೆ

ಆಗುತ್ತಿದ್ದ ಕಾರಣ ಹಾಗೂ ಅದೇ ಸಮಯದಲ್ಲಿ ನನಗೆ ಪ್ರೇಮಕುಮಾರನ ಪರಿಚಯವಾಗಿದ್ದು, ಆತ ಸಹ ಕೆಲಸಕ್ಕಾಗಿ ಹುಡುಕಾಡುತ್ತಿದ್ದ ಕಾರಣ, ನಾನು 2017-2018 ನೇ ಇಸ್ವಿಯಲ್ಲಿ ಪ್ರೇಮಕುಮಾರನನ್ನು ನನ್ನ ಕಾರವಾರದ ಶಿಪ್ಪಿಂಗ್ ಕಂಪನಿಯನ್ನು ನೋಡಿಕೊಳ್ಳಲು ನೇಮಿಸಿರುತ್ತೇನೆ ಹಾಗೂ ಪ್ರತಿ ತಿಂಗಳು ರೂ.15,000/- ವೇತನ ನೀಡುವುದರ ಜೊತೆಗೆ ವರ್ಷಾಂತ್ಯದಲ್ಲಿ ಆತನಿಗೆ ಸ್ವಲ್ಪ ಹಣವನ್ನು ನೀಡಲು ಒಪ್ಪಿಕೊಂಡಿರುತ್ತೇನೆ ಹಾಗೂ ಅದಕ್ಕೆ ಪ್ರೇಮಕುಮಾರನು ಒಪ್ಪಿಕೊಂಡಿರುತ್ತಾನೆ. ಶಿಪ್ಪಿಂಗ್ ಕಂಪನಿಯ ವ್ಯವಹಾರವನ್ನು ನೋಡಿಕೊಳ್ಳುವ ಬಗ್ಗೆ ನಾನು ಪ್ರೇಮಕುಮಾರನಿಗೆ ಅಧಿಕಾರ ಪತ್ರವನ್ನು (Authorization letter) ನೀಡಿರುತ್ತೇನೆ.

3. ಪ್ರೇಮಕುಮಾರನನ್ನು ನನ್ನ ಶಿಪ್ಪಿಂಗ್ ಕಂಪನಿಯನ್ನು ನೋಡಿಕೊಳ್ಳಲು ನೇಮಿಸುವುದರ ಜೊತೆಗೆ ಆತನಿಗೆ ಓಡಾಡಲು ನನ್ನ ಸುಜುಕಿ ಎಕ್ಸಿಸ್ ಸ್ಕೂಟರ್ ನಂಃ ಕೆಎ-19/ಇವಿ-8128 ನೇದನ್ನು ನೀಡಿರುತ್ತೇನೆ. ಪ್ರೇಮಕುಮಾರ ನನ್ನ ಶಿಪ್ಪಿಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಆತನ ಅಣ್ಣ ಚಾಸಾ-19 ರಾಜೇಶ, ಆತನ ಹೆಂಡತಿ ಚಾಸಾ-21 ಮೀನಾಕ್ಷಿ , ಆಕೆಯ ತಮ್ಮ ಚಾಸಾ-20 ರಾಹುಲ್ ರವರ ಪರಿಚಯ ಇರುತ್ತದೆ. ನಮ್ಮ ಕಾರವಾರ ಶಿಪ್ಪಿಂಗ್ ಕಂಪನಿಯಲ್ಲಿ ಅನ್ ಲೋಡ್ ಮಾಡಿಕೊಳ್ಳುತ್ತಿದ್ದ ಸರಕು ಅಂದರೆ ಅದು ಡಾಂಬರ್ ಆಗಿರುತ್ತದೆ. ಶಿಪ್ಪಿಂಗ್ ಕಂಪನಿಯ ವ್ಯವಹಾರವನ್ನು ನಡೆಸಲು ನಾವು ಕಸ್ಟಮ್ ಇಲಾಖೆಯಿಂದ ಹಾಗೂ ಬಂದರು ಇಲಾಖೆಯಿಂದ ಪರವಾನಗಿಯನ್ನು ಪಡೆದುಕೊಂಡಿರುತ್ತೇವೆ. ಈ ಪ್ರಕರಣದ 1 ನೇ ಆರೋಪಿಯೂ ಸಹ ಶಿಪ್ಪಿಂಗ್ ಕಂಪನಿಯನ್ನು ಹೊಂದಿದ್ದು, ಆತನೂ ಸಹ ಡಾಂಬರ್ ಅನ್ ಲೋಡಿಂಗ್ ವ್ಯವಹಾರವನ್ನು ಮಾಡುತ್ತಾ ಬಂದಿರುತ್ತಾನೆ. ಪ್ರೇಮಕುಮಾರನು ನೋಡಿಕೊಳ್ಳುತ್ತಿದ್ದ ನಮ್ಮ ಶಿಪ್ಪಿಂಗ್ ಕಂಪನಿಯ ವ್ಯವಹಾರ ಚೆನ್ನಾಗಿ ನಡೆಯುತ್ತಿದ್ದು, 1 ನೇ ಆರೋಪಿಯ ಶಿಪ್ಪಿಂಗ್ ಕಂಪನಿಯ ವ್ಯವಹಾರ ಕಡಿಮೆಯಾಗಿದ್ದು, ಈ ಬಗ್ಗೆ 1 ನೇ ಆರೋಪಿ ಹಾಗೂ ಪ್ರೇಮಕುಮಾರನ ನಡುವೆ ವ್ಯವಹಾರದಲ್ಲಿ ಪೈಪೋಟಿಯಾಗಿ, ಇಬ್ಬರ ನಡುವೆ ವೈಮನಸ್ಸು ಉಂಟಾಗಿರುತ್ತದೆ. ಈ ವಿಷಯವನ್ನು ಪ್ರೇಮಕುಮಾರ ನನಗೆ ಕರೆ ಮಾಡಿ ಹೇಳುತ್ತಿದ್ದನು.

4. 2018 ರಲ್ಲಿ ಒಂದು ದಿನ (ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ), ಬೆಳಿಗ್ಗೆ ಎದ್ದು ನಾನು ನನ್ನ ಮೊಬೈಲ್ ನ್ನು ನೋಡಿದಾಗ, ಹಿಂದಿನ ರಾತ್ರಿ 01-00 ಗಂಟೆಗೆ ಪ್ರೇಮಕುಮಾರನ

ಹೆಂಡತಿ ಹಾಗೂ ಆಕೆಯ ತಮ್ಮನ 3-4 Missed calls ನನ್ನ ಫೋನ್ ಗೆ ಬಂದಿದ್ದು, ಅವುಗಳನ್ನು ನೋಡಿದ ನಾನು ಕೂಡಲೇ ಚಾಸಾ-20 ರಾಹುಲ್ ನಿಗೆ ವಾಪಸ್ ಕರೆ ಮಾಡಿದಾಗ, ಆತ ನಿನ್ನೆಯ ದಿನ ಸಂಜೆ ನನ್ನ ಬಾವ ಪ್ರೇಮಕುಮಾರನು ಮನೆಯಿಂದ ಹೋದವರು ಪುನಃ ವಾಪಸ್ ಮನೆಗೆ ಬಂದಿರುವುದಿಲ್ಲ, ಆದ್ದರಿಂದ ನಾನು ನಿಮಗೆ ಕರೆ ಮಾಡಿದ್ದೆ ಎಂದು ಹೇಳಿರುತ್ತಾನೆ. ಆಗ ನಾನು ಆತನಿಗೆ ಪೊಲೀಸ್ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳಿರುತ್ತೇನೆ ಹಾಗೂ ಆ ನಂತರ ನಾನು ಕಾರವಾರಕ್ಕೆ ಬಂದು, ಪ್ರೇಮಕುಮಾರನ ಮನೆಗೆ ಹೋಗಿ, ಆತನ ಮನೆಯವರಿಗೆ ಸಮಾಧಾನ ಮಾಡಿ, ನಂತರ ವಾಪಸ್ ಮಂಗಳೂರಿಗೆ ಹೋಗಿರುತ್ತೇನೆ.

5. ಆ ನಂತರ ಎಷ್ಟು ದಿನಗಳ ನಂತರ ಎಂದು ನನಗೆ ನೆನಪಿಲ್ಲ, ಆದರೆ ಒಂದು ದಿನ ಚಾಸಾ-20 ರಾಹುಲ್ ನನಗೆ ಕರೆ ಮಾಡಿ, ನನ್ನ ಬಾವ ಪ್ರೇಮಕುಮಾರನ ಶವ ಸಿಕ್ಕಿರುತ್ತದೆ ಎಂದು ಹೇಳಿರುತ್ತಾನೆ. ವಿಷಯ ತಿಳಿದ ಕೂಡಲೇ ನಾನು ಕಾರವಾರಕ್ಕೆ ಬಂದು, ಪ್ರೇಮಕುಮಾರನ ತಾಯಿಯ ಮನೆಯ ಹತ್ತಿರ ಕಾಯುತ್ತಿದ್ದು, ಅಂಬ್ಯುಲೇನ್ಸ್ ನಲ್ಲಿ ಪ್ರೇಮಕುಮಾರನ ಶವವನ್ನು ತಂದಿರುತ್ತಾರೆ. ಅಂಬ್ಯುಲೇನ್ಸ್ ನಲ್ಲಿ ಶವ ತಂದವರ ಪರಿಚಯ ನನಗೆ ಇರುವುದಿಲ್ಲ. ಮನೆಯ ಬಳಿ ಜನರು ವ್ಯವಹಾರದ ಸಲುವಾಗಿ 1 ನೇ ಆರೋಪಿಯು ಪ್ರೇಮಕುಮಾರನನ್ನು ಕೊಲೆ ಮಾಡಿರುತ್ತಾನೆ ಎಂದು ಮಾತನಾಡಿಕೊಳ್ಳುತ್ತಿದ್ದರು. ಆ ನಂತರ ನಾನು ಮೃತನ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡಿರುತ್ತೇನೆ.

6. ಪೊಲೀಸರು ಜಪ್ತುಪಡಿಸಿಕೊಂಡ ನನ್ನ ಸುಜುಕಿ ಎಕ್ಸಿಸ್ ಸ್ಕೂಟರ್ ನ್ನು ನಾನು ನ್ಯಾಯಾಲಯದಿಂದ ಬಿಡಿಸಿಕೊಂಡಿರುತ್ತೇನೆ. ಆ ನಂತರ ಪೊಲೀಸರು ಶಿಪ್ಪಿಂಗ್ ಕಂಪನಿಗೆ ಸಂಬಂಧಿಸಿದ ದಾಖಲಾತಿಗಳನ್ನು, ನಾನು ಪ್ರೇಮಕುಮಾರನಿಗೆ ಅಧಿಕಾರ ಪತ್ರವನ್ನು (Authorization letter) ಹಾಗೂ ನನ್ನ ಸ್ಕೂಟರ್ ಗೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ಹೇಳಿದ ಮೇರೆಗೆ, ನಾನು ಸದರಿ ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತೇನೆ.

**(ನ್ಯಾಯಾಲಯದ ಸಮಯದ ಅಭಾವದಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ